ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಅಥಣಿ

<u>ಸಿ.ಸಿ. ನಂಃ 981/ 2026</u>

ಫಿರ್ಯಾದುದಾರರು - ಕರ್ನಾಟಕ ರಾಜ್ಯ,
ಅಥಣಿ ಪೋಲಿಸರಿಂದ

- ವಿರುದ್ದ-

ಆರೋಪಿತ - 1) ಬಿಮಣ್ಣ ಅಣ್ಣಪ ಮಾಳಿ

**<u>ಆರೋಪಣೆ</u>**

ನಾನು ಶ್ರೀ ಓಂಕಾರ ಮೂರ್ತಿ, ಬಿ.ಕಾಂ. ಎಲ್ಎಲ್.ಬಿ, ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ಅಥಣಿ, ಈ ಮೂಲಕ ಆರೋಪಿತರ ಮೇಲೆ ಮಾಡಿದ ಆರೋಪಣೆ ಏನೆಂದರೆ,

ಆರೋಪಿ ನಂಃ **1)** ಬಿಮಣ್ಣ ಅಣ್ಣಪ ಮಾಳಿ**,**
ವಯಾಃ **26** ವರ್ಷ**,** ಉದ್ಯೋಗಃ ಡ್ರೈವರ ಕೆಲಸ**,**
ಸಾಃ ಮಾಳಿ ಗಲ್ಲಿ ಬಿಲುರ, ತಾಃಜತ್ತ**,** ರಾಜ್ಯ**-** ಮಹಾರಾಷ್ಟ್ರ**.**

**..** ಆರೋಪಿ

ಈ ಕೆಳಗಿನಂತೆ ಆರೋಪಣೆಯನ್ನು ಹೊರೆಸಿದ್ದೇನೆ**.**

ದಿನಾಂಕ 29.01.2026 ರಂದು ಸಾಯಂಕಾಲ 05-00 ಗಂಟೆ ಸುಮಾರಿಗೆ ಅಥಣಿ ಪೋಲಿಸ ಠಾಣಾ ಹದ್ದಿಯ ಪೈಕಿ, ಬಳ್ಳಿಗೇರಿ ಗ್ರಾಮ ಹದ್ದಿಯಲ್ಲಿ ಪ್ರಶಾಂತ ಹೋಟೇಲ್ ಮತ್ತು ಲಾಡ್ಜ ಹತ್ತಿರ ಅಥಣಿ-ಜತ್ತ ಸಾರ್ವಜನಿಕ ರಸ್ತೆಯ ಮೇಲೆ, ಆರೋಪಿಯಾದ ನೀವು ಟ್ರಾಕ್ಟರ ಚೆಸ್ಸಿ ನಂಬರ ಎಜಡ್ ವಿಡಿಜಿ720587ಎಸ್3 ಮತ್ತು ಇಂಜಿನ್ ನಂಃ3105ಇಎಲ್ಯು83ಸಿ712720ಎಫ್20 ನೇದ್ದನ್ನು ಅತೀ ಜೋರಿನಿಂದ ಮತ್ತು ನಿರ್ಲಕ್ಷತನದಿಂದ ಚಲಾಯಿಸಿರುವಿರಿ, ನಿಮ್ಮ ಈ ಕ್ರಮ ಭಾರತೀಯ ನಾಗರೀಕ ಸಂಹಿತೆ ಕಲಂ **281** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ಟ್ರಾಕ್ಟರ ಚೆಸ್ಸಿ ನಂಬರ ಎಜಡ್ ವಿಡಿಜಿ**720587**ಎಸ್**3** ಮತ್ತು ಇಂಜಿನ್ ನಂಃ**3105**ಇಎಲ್ಯು**83**ಸಿ**712720**ಎಫ್**20** ನೇದ್ದರಲ್ಲಿ ಲಿ ಯಾವುದೇ ಪಾಸ್ ವ ಪರ್ಮಿಟ್ ಲೈಸೆನ್ಸ ಇಲ್ಲದೇ ದೊಡ್ಡ ದೊಡ್ಡ ಸೌಂಡಗಳನ್ನು ಜೋರಾಗಿ ಮತ್ತು ಕರ್ಕಶವಾಗಿ ಸಾರ್ವಜನಿಕರಿಗೆ ಮತ್ತು ಇತರೆ ವಾಹನ ಸವಾರರಿಗೆ ತೊಂದರೆ ಆಗುವಂತೆ ಮಾಡಿರುವಿರಿ**,** ನಿಮ್ಮ ಈ ಕ್ರಮ ಕರ್ನಾಟಕ ಪೋಲಿಸ್ ಕಾಯ್ದೆಯ ಕಲಂ **36** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ**.**

ಪ್ರಶ್ನೆ: **1 -** ಈಗ ಓದಿ ಹೇಳಿದ ಆಪಾದನೆ ತಿಳಿಯತೆ **?**

ಉತ್ತರ **:**

ಪ್ರಶ್ನೆ: **2 -** ಸದರಿ ಆಪಾದನೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುವಿರೋ**?**

ಉತ್ತರ **:**

[ಈ ಆಪಾದನೆಯನ್ನು ಈ ದಿನ ದಿನಾಂಕ 09.06.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ]

ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ಅಥಣಿ.